


# ಉನ್ನತ ಜೀವನ

❑ ಡಾ. ವಸಂತ ಕುಮಾರ್

**ಭಾರತೀಯ ದೃಷ್ಟಿಯಲ್ಲಿನ ಉನ್ನತ ಜೀವನದ ಪರಿಕಲ್ಪನೆಯಲ್ಲಿ ಪರಿಪೂರ್ಣ ವ್ಯಕ್ತಿತ್ವದ ವಿಕಸನ ಅಡಕವಾಗಿದೆ ಎಂಬುದನ್ನು ಸರಳವಾದ ಭಾಷೆಯಲ್ಲಿ ತಿಳಿಸಿರುವ ಡಾ.ವಸಂತಕುಮಾರ್ ಅವರು ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಂಖ್ಯಾಶಾಸ್ತ್ರದ ಪ್ರಾಧ್ಯಾಪಕರಾಗಿದ್ದಾರೆ.**

ದಿನಬೆಳಗಾದರೆ ಎಲ್ಲರೂ, ಎಲ್ಲ ಜೀವರಾಶಿಗಳೂ ಅವರವರ ಜೀವನದಲ್ಲಿ ನಿರತರಾಗಿರುವರು. ಕೆಲವರು ಜೀವನ ನಡೆಸುತ್ತಿರುವರು, ಬಹು ಜನರ ಜೀವನ ಸಾಗುತ್ತಿರುವುದು, ಉಳಿದವರು ಜೀವನವನ್ನು ತಳ್ಳಬೇಕಾಗಿರುವುದು. ಕೊನೆಯ ವರ್ಗದವರು, ಆರ್ಥಿಕ ಮುಗ್ಗಟ್ಟನಿಂದ ಕೂಡಿದವರು; ಸಾಮಾನ್ಯ ಜೀವನದ ಆವಶ್ಯಕ ವಸ್ತುಗಳನ್ನೂ ಪಡೆಯಲಾರದೆ ಕಷ್ಟದಲ್ಲಿ ದಿನಗಳನ್ನು ನೂಕಬೇಕಾಗಿರುವುದು. ಬಹು ಮಂದಿಯ ಜೀವನವು ಯಾಂತ್ರಿಕವಾಗಿ ಹಗಲು ರಾತ್ರಿಗಳನ್ನು ಕಳೆಯುತ್ತಾ, ಆಸೆಗಳ ಬೆನ್ನಟ್ಟುತ್ತಾ ಸಸ್ಯಗಳಂತೆ ಹುಟ್ಟಿ ಸಸ್ಯಗಳಂತೆ ಕೊನೆ ಗಾಣುತ್ತಿರುವುದು. ಕೆಲವರು ಮಾತ್ರ ಜೀವನವನ್ನು ತಾವು ಇಚ್ಛಿಸಿದ ದಿಕ್ಕಿನಲ್ಲಿ ನಡೆಸುತ್ತಿರುವರು. ಕಾರಣ, ಅವರಿಗೆ ಒಂದು ಗುರಿ ಇರುವುದು. ಬಡವರಿಗೆ ಜೀವನವೇ ಹೊರೆಯಾಗಿದ್ದರೆ, ಸಾಮಾನ್ಯರ ಜೀವನ ಕೈಯಿಂದ ಜಾರಿಹೋಗುತ್ತಿರುವುದು. ಆಸೆಗಳೆಂಬ ಬಿರುಗಾಳಿಗೆ ಸಿಕ್ಕಿ ದಿಕ್ಕು ಕಾಣದಂತಾಗಿ ಅವರ ಜೀವನ ಗುರಿ ತಪ್ಪಿರುವುದು. ತಮ್ಮ ಗುರಿಯಲ್ಲಿ ದೃಢವಾದ ವಿಶ್ವಾಸವಿರುವ ಕೆಲವರು ಮಾತ್ರ ಒಂದು ನಿರ್ದಿಷ್ಟವಾದ ದಿಕ್ಕಿನಲ್ಲಿ ಜೀವನ-ನೌಕೆಯನ್ನು ನಡೆಸಬಲ್ಲರು. ಇವರು ಸಾಮಾನ್ಯವಾಗಿ ಅಲ್ಪಸಂಖ್ಯಾತರು.

ಜೀವನವು ಅರ್ಥಪೂರ್ಣವೂ ಸಾರ್ಥಕವೂ ಆಗಬೇಕಾದರೆ ಅದು ನಿತ್ಯಜೀವನದ ಜಂಜಾಟದಿಂದ ಮೇಲೇಳಬೇಕಾಗುವುದು. ಜೀವನವು ಸಾರ್ಥಕವಾಗುವುದು, ಅದು ಸಾರ್ಥಕವಾದ ವಿಶಿಷ್ಟವಾದ ಗುರಿಯೆಡೆಗೆ ಸಾಗಿದಾಗ ಮಾತ್ರ. ವ್ಯಕ್ತಿಗಳಿಗೆ ನಿತ್ಯ ಜೀವನದ ಸೌಕರ್ಯಗಳು ಇರಲಿ, ಇಲ್ಲದಿರಲಿ, ಅವರ ಜೀವನದಲ್ಲಿ ಯಾವುದೊ ಒಂದು ಅತೃಪ್ತಿ ಕಾಡುತ್ತಿರುವುದು. ಜೀವನದಲ್ಲಿ ಸುಖವಿರಲಿ ಇಲ್ಲದಿರಲಿ ಪ್ರತಿಯೊಬ್ಬರೂ ಮುಂದುವರೆಯಲು ತವಕಿಸುತ್ತಿರುವರು; ಅಶಾಂತಿಯಿಂದ ಪಾರಾಗಲು, ಶಾಂತಿಯನ್ನು ಪಡೆಯಲು ಹವಣಿಸುತ್ತಿರುವರು. ಇರುವ ಸ್ಥಿತಿಯಲ್ಲಿಯೇ ಇರಲು ನಾವು ಎಷ್ಟೇ ಇಚ್ಛೆಪಟ್ಟರೂ ಸಾಧ್ಯವಾಗದು. ಯಾವುದೋ ಒಂದು ಶಕ್ತಿ ಮುನ್ನುಗ್ಗುವಂತೆ ನಮ್ಮನ್ನು ಪ್ರೇರೇಪಿಸುತ್ತಿರುವುದು. ಇದೇ ಮನುಜಕುಲದ ಕಥೆ. ಇದರ ಹಿಂದೆ ಕೆಲಸ ಮಾಡುವ ವಿವಿಧ ಅಂಶಗಳ ವಿಶ್ಲೇಷಣೆಯನ್ನು ಈ ಲೇಖನದಲ್ಲಿ ಮಾಡಲು ಯತ್ನಿಸಿದೆ.

## ವ್ಯಕ್ತಿತ್ವ ಆಗಲೇ ಇದೆ

ನಮಗೆಲ್ಲರಿಗೂ ಒಂದು ವ್ಯಕ್ತಿತ್ವ ಇರುವುದು. ನಾವು ಯಾರೇ ಆಗಲಿ—ಕಿರಿಯರಾಗಲಿ, ಹಿರಿಯರಾಗಲಿ, ಸಂಸಾರದಲ್ಲಿ ಸಮಾಜದಲ್ಲಿ ಯಾವ ಪಾತ್ರವನ್ನೇ ವಹಿಸಿರಲಿ, ಜವಾಬ್ದಾರಿ ಕಡಮೆ ಇರಲಿ, ಹೆಚ್ಚಿರಲಿ, ಯಾವ ವರ್ಗಕ್ಕೇ ಸೇರಿರಲಿ—ನಮಗೆಲ್ಲಾ ಒಂದು ವ್ಯಕ್ತಿತ್ವ ಇರುವುದು. ಅದೇನೂ ಹೊರಗಿನಿಂದ ಬರುವುದಿಲ್ಲ; ಅದು ನಮ್ಮಲ್ಲಿಯೇ ಇರುವುದು. ಇಂದು ಆಟವಾಡುತ್ತಿರುವ ಮಗು ಕಾಲಾನಂತರ ತಾಯಿಯಾಗಿ ಇಡೀ ಸಂಸಾರದ ಹೊಣೆಯನ್ನು ಹೊರುವಂತೆ, ಇದು ಕಾಲಕಾಲಕ್ಕೆ ಬದಲಾವಣೆ ಆಗುತ್ತಿರುವುದು. ವ್ಯಕ್ತಿತ್ವದ ಇಂತಹ ಬದಲಾವಣೆಗೆ ಕಾರಣ, ಪ್ರಾಪಂಚಿಕ, ವ್ಯಾವಹಾರಿಕ ಸಂದರ್ಭಗಳು. ಇಚ್ಛೆ ಇರಲಿ ಇಲ್ಲದಿರಲಿ, ಸಿದ್ಧತೆ ಇರಲಿ ಇಲ್ಲದಿರಲಿ, ಯೋಗ್ಯತೆ ಇರಲಿ ಇಲ್ಲದಿರಲಿ ವ್ಯಕ್ತಿಗಳು ತಂದೆತಾಯಿಗಳಾಗುವರು, ನೌಕರರಾಗುವರು ಅಥವಾ ಶಿಕ್ಷಕರಾಗುವರು. ತಾವು ಸನ್ಮಾರ್ಗದಲ್ಲಿ ಹೋಗದಿದ್ದರೂ ತಮ್ಮ ಮಕ್ಕಳು, ಕೆಳಗಿನ ನೌಕರರು ಅಥವಾ ವಿದ್ಯಾರ್ಥಿಗಳು ಸನ್ಮಾರ್ಗಿಗಳಾಗಬೇಕೆಂದು ಬಯಸುವರು; ತಮಗೆಷ್ಟು ಕಷ್ಟವಿದ್ದರೂ ಮಕ್ಕಳು ಸುಖಿಗಳಾಗಬೇಕೆಂದು ದುಡಿಯುವರು; ತಮಗೆ ಶಿಸ್ತು, ಕಾರ್ಯತತ್ಪರತೆ, ಜ್ಞಾನ ಇಲ್ಲದಿದ್ದರೂ ತಮ್ಮ ಸಹಾಯಕ ಸಿಬ್ಬಂದಿ, ವಿದ್ಯಾರ್ಥಿಗಳು ಇವೆಲ್ಲವನ್ನೂ ಪಡೆಯಬೇಕು ಇಲ್ಲವೆ ಪಡೆದಿರಬೇಕು ಎಂಬ ಧೋರಣೆಯಿಂದ ನಡೆದುಕೊಳ್ಳುವರು.

ಇಂತಹ ಬದಲಾವಣೆಯು ಸಂದರ್ಭವನ್ನು ಅನುಸರಿಸಿದ

ಅನಿವಾರ್ಯ ಬದಲಾವಣೆ. ಇದು ಪೂರ್ವನಿಯೋಜಿತವಲ್ಲ; ಗೊತ್ತಾದ ಗುರಿಯೆಡೆಗೆ ಪಯಣಿಸದೆ ಗಾಳಿಗೆ ತೂರಿಹೋಗುವ ಕಾಗದದಂತೆ, ಹೋಗಬೇಕಾದ ಸ್ಥಳಕ್ಕೆ ಹೋಗದೆ ಸಿಕ್ಕಿದ ಬಸ್ಸು ಹತ್ತಿದಂತೆ, ತೋಟಗಾರ ಬೇಕಾದ ಗಿಡವನ್ನು ನಿಯೋಜಿತ ಸ್ಥಳದಲ್ಲಿ ನೆಟ್ಟು ಇಚ್ಛಿಸಿದ ಆಕಾರದಲ್ಲಿ ಅದರ ರೆಂಬೆಗಳನ್ನು ಕತ್ತರಿಸಿ ಬೆಳೆಸಿದ ತೋಟದಂತೆ ಆಗುವ ಬದಲು ಗಿಡಗಳು ತಾವಾಗಿ ಬೆಳೆದ ಬಯಲಿನಂತೆ. ಇಂತಹ ವ್ಯಕ್ತಿತ್ವದ ಬೆಳವಣಿಗೆಯು ಎಲ್ಲ ಸಾಮಾನ್ಯರ ಜೀವನದಲ್ಲಿಯೂ ಆಗುತ್ತಿರುವುದು. ಇದು ಸಸ್ಯವರ್ಗ ಪ್ರಾಣಿವರ್ಗಗಳಲ್ಲಿಯೂ ಕಂಡುಬರುವುದು. ಆದರೆ ವ್ಯಕ್ತಿಗಳ ಬೆಳವಣಿಗೆಯು ಉಪಯೋಗಕರವೂ ಸಾರ್ಥಕವೂ ಆಗಬೇಕಾದರೆ ಅದಕ್ಕೆ ಒಂದು ಯೋಜನೆ, ಪೂರ್ವಸಿದ್ಧತೆ, ಅಡಿಪಾಯ, ನಿರ್ದಿಷ್ಟವಾದ ಗುರಿ, ಮಾರ್ಗದರ್ಶನ, ಸಾಧನೆ— ಇವೆಲ್ಲ ಬೇಕಾಗುವುವು. ಇವೇ ಉನ್ನತ ಜೀವನಕ್ಕೆ ನಮ್ಮನ್ನು ಕೊಂಡೊಯ್ಯುವ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಹಕಾರಿಯಾಗುವ ಅಂಶಗಳು. ಈ ಮಾರ್ಗದಲ್ಲಿ ಹೋಗಬೇಕೆಂದು ಇಚ್ಛಿಸುವವರು ಮಾನವ ವ್ಯಕ್ತಿತ್ವದ ನೈಜ ಸ್ವರೂಪವನ್ನು ತಿಳಿಯಲು ಪ್ರಯತ್ನಿಸಬೇಕಾಗುವುದು. ಇದೇ ಪ್ರಥಮ ಹೆಜ್ಜೆ.

**ಆಂತರಿಕ ಬೆಳವಣಿಗೆ**

ವ್ಯಕ್ತಿತ್ವದ ಬೆಳವಣಿಗೆ ಎನ್ನುವುದು ಬಾಹ್ಯಕ್ಕೆ ಸಂಬಂಧಪಟ್ಟ ವಿಷಯವಲ್ಲ; ಅದು ಆಂತರಿಕವಾದುದು. ಒಬ್ಬರು ದಪ್ಪವಾಗಿ ಎತ್ತರವಾಗಿ ಬೆಳೆದಿರುವರು ಎಂದರೆ ಅವರ ವ್ಯಕ್ತಿತ್ವ ಬೆಳೆದಿದೆ ಎಂದು ಹೇಳಲಾಗದು. ಮಹಾನ್ ಸಂಗೀತಗಾರರು ಮಾತನಾಡುವಾಗ ಅವರ ಧ್ವನಿ ಶ್ರುತಿಬದ್ಧವಾಗಿರುವಂತೆ ತೋರುವುದಿಲ್ಲ; ನವಿರಾದ ಸೂಕ್ಷ್ಮ ಸ್ವರಗಳನ್ನು ಇಚ್ಛಿಸಿದ ಸ್ಥಾಯಿಯಲ್ಲಿ ಹಾಡುತ್ತಾ ನಮ್ಮ ಮನಸ್ಸಿನಲ್ಲಿ ಭಾವಗಳು ಸ್ಫುರಿಸುವಂತೆ ಮಾಡುವ ಶಕ್ತಿ ಅವರ ಕಂಠಕ್ಕೆ ಇರುವುದು ಗೊತ್ತಾಗುವುದಿಲ್ಲ. ಮೇಧಾವಿಗಳಾದ ವಿಜ್ಞಾನಿಗಳು ಮಾತನಾಡುವಾಗ ಅವರ ಆಳವಾದ ಪಾಂಡಿತ್ಯ, ಅನುಭವ, ದೂರದರ್ಶಿತ್ವ, ಅವರು ಪ್ರತಿಪಾದಿಸುತ್ತಿರುವ ತತ್ತ್ವದ ಹಿರಿಮೆ ಇವೆಲ್ಲ ನಮಗೆ ಎದ್ದು ಕಾಣುವುದಿಲ್ಲ. ಪ್ರತಿಭಾಶಾಲಿಗಳಾದ ಮಹಾಕವಿಗಳು ಹೇಗೆ ಕಾಣುವರೆಂಬ ಕುತೂಹಲದಿಂದ ಅವರನ್ನು ನೋಡಲು ಹೋದ ಜನರು, ಕುವೆಂಪು ಅವರು ಮಾತನಾಡುವುದನ್ನು ಕೇಳಿ ನಿರಾಶೆಯಿಂದ ಹಿಂತಿರುಗಿದುದುಂಟು. ಅನೇಕ ಕಲಾಕೋವಿದರು ನೋಡಲು ಆಕರ್ಷಕವಾಗಿರದೆ ಸಾಮಾನ್ಯರಂತೆ ಕಾಣುವರು. ಏಕಾಗ್ರತೆಯೇ ಮೂರ್ತಿವೆತ್ತಂತೆ ಇರುವ, ಸತ್ಯಸಾಕ್ಷಾತ್ಕಾರದ ಅಮೃತವನ್ನುಂಡ ಅನೇಕ ಮಹಾಯೋಗಿಗಳು ಜಡರಂತೆ ಕಾಣುವರು. ಇಂತಹ ವಿಭೂತಿಪುರುಷರ ವ್ಯಕ್ತಿತ್ವಗಳು ಔನ್ನತ್ಯದ ಪರಾಕಾಷ್ಠೆಯನ್ನು ಮುಟ್ಟಿದ್ದರೂ, ನಾವು ಅದನ್ನು ಕಾಣಬೇಕಾದರೆ ಅವರ ಆಂತರ್ಯವನ್ನು ನೋಡಬೇಕು. ಒಮ್ಮೆ ಶ್ರೀರಾಮಕೃಷ್ಣರು ಗಾಡಿಯಿಂದ ಇಳಿಯುವಾಗ ಭಗವದ್ಭಾವದಿಂದ ಭಾವಾವಿಷ್ಟರಾಗಿದ್ದುದರಿಂದ ಬಾಹ್ಯಪ್ರಜ್ಞೆ ಅಷ್ಟಾಗಿ ಇಲ್ಲದೆ ಸಂಜೆಯಾಗಿರುವುದು ತಿಳಿಯದೆ, "ಏನು, ಸಂಜೆಯಾಯಿತೆ, ಸಮಯವೆಷ್ಟು?" ಎಂದು ತಮ್ಮನ್ನು ಹಿಡಿದುಕೊಂಡಿದ್ದವರನ್ನು ಕೇಳಿದುದನ್ನು ಕಂಡು, ಅವರನ್ನು ಕುತೂಹಲದಿಂದ ನೋಡಲು ಬಂದ ವ್ಯಕ್ತಿಯೊಬ್ಬ, "ಬೀದಿಯ ದೀಪಗಳು ಹೊತ್ತಿವೆ. ಅದನ್ನು ನೋಡಿದರೆ ಸಂಜೆಯಾಗಿರುವುದು ಗೊತ್ತಾಗುವುದಿಲ್ಲವೇ? ಇದೆಲ್ಲಾ ಕಪಟ!" ಎಂದುಕೊಂಡು ಮನೆಯೊಳಕ್ಕೆ ಹೋದನಂತೆ!

**ಸುಪ್ತ-ವ್ಯಕ್ತ**

ವ್ಯಕ್ತಿತ್ವದ ಬೆಳವಣಿಗೆ ಎಂದರೆ ನಮ್ಮಲ್ಲಿ ಸುಪ್ತವಾಗಿರುವ ವ್ಯಕ್ತಿತ್ವವು ವಿಕಾಸವಾಗುವುದು ಎಂದರ್ಥ. ನಮ್ಮ ವ್ಯಕ್ತಿತ್ವವು ನಮ್ಮಲ್ಲಿ ಅಂತರ್ಗತವಾಗಿರುವುದು ಮತ್ತು ಆಳದಲ್ಲಿ ಇರುವುದು. ಅದು ವ್ಯಕ್ತವಾಗಬೇಕು. ಯಾರ ವ್ಯಕ್ತಿತ್ವವೂ ಇದ್ದಕ್ಕಿದ್ದಂತೆ ಬೆಳೆದುಬಿಡುವುದಿಲ್ಲ. ಅದು ಕಣಕಣವಾಗಿ ಅರಳುವುದು, ವಿಕಾಸವಾಗುವುದು. ಇದಕ್ಕೆ ಪ್ರಯತ್ನ, ಸಾಧನೆ ಮತ್ತು ಹೋರಾಟ ಬೇಕಾಗುವುದು. ಪ್ರಗತಿ ಇರುವೆಡೆ ಒಂದು ಹೋರಾಟವಿದೆ. ಎಲ್ಲಿ ಹೋರಾಟವಿಲ್ಲವೊ ಅಲ್ಲಿ ಪ್ರಗತಿ ಇಲ್ಲ. ನಾವು ಇಚ್ಛಿಸಿದ ವ್ಯಕ್ತಿತ್ವ ನಮಗೆ ತಾನಾಗಿಯೇ ಬಂದುಬಿಡುವುದಿಲ್ಲ. ನಾವು ಏನೇನೋ ಆಗಲಾರೆವು. ಆದರೆ ಪ್ರಯತ್ನದಿಂದ ನಾವು ಏನೋ ಒಂದು ಆಗಬಹುದು. ನಾವು ತಾನಸೇನ ಆಗಲಾಗುವುದಿಲ್ಲ, ಆದರೆ ಸಾಧನೆಯಿಂದ ಉತ್ತಮ ಸಂಗೀತಗಾರರಾಗಬಹುದು; ಐನ್‌ಸ್ಟೈನ್ ಆಗಲು ಸಾಧ್ಯವಿಲ್ಲ, ಒಬ್ಬ ಉತ್ತಮ ವಿಜ್ಞಾನಿ ಆಗಬಹುದು. ಯುವಕರೆಲ್ಲರೂ ಸ್ವಾಮಿ ವಿವೇಕಾನಂದರಂತೆ ಆಗಲು ಬಯಸುವರು. ಇದು ಸಾಧ್ಯವಿಲ್ಲ. ಅವರನ್ನು ನಮ್ಮ ಆದರ್ಶವಾಗಿ ತೆಗೆದುಕೊಂಡರೆ ನಾವು ಈಗ ಇರುವ ಸ್ಥಿತಿಗಿಂತ ಉತ್ತಮರಾಗಬಹುದು. ನಾವು ಯಾವ ಸ್ಥಿತಿಯಲ್ಲಿ ಪ್ರಸ್ತುತ ಇರುವೆವೊ ಅಲ್ಲಿಂದ ಬೆಳವಣಿಗೆ ಪ್ರಾರಂಭವಾಗಬೇಕು. ನಾವು ಎಲ್ಲಿರುವೆವೊ ಅಲ್ಲಿಂದ ಮೇಲೇರಬೇಕು— ವಿಕಾಸದ ಏಣಿಯಲ್ಲಿ ನಾವು ಯಾವ ಮೆಟ್ಟಲಿನಲ್ಲಿ ಇರುವೆವೊ ಅಲ್ಲಿಂದ ಮೇಲಕ್ಕೆ ಏರಬೇಕಾಗಿದೆ. ಅವಸರಕ್ಕೆ ಯಾವ ಬೆಳವಣಿಗೆಯೂ ಸಾಧ್ಯವಿಲ್ಲ. ಒಂದು ಸಮಾಜದ ವಿಷಯದಲ್ಲಿಯೂ, ಒಂದು ದೇಶದ ವಿಷಯದಲ್ಲಿಯೂ ಹೀಗೆಯೇ.

**ವ್ಯಕ್ತಿತ್ವದ ಎರಡು ಭಾಗಗಳು**

ನಮ್ಮ ವ್ಯಕ್ತಿತ್ವಕ್ಕೆ ಎರಡು ಭಾಗಗಳಿವೆ. ಒಂದು ಹೊರನೋಟಕ್ಕೆ ಕಾಣುವಂತಹುದು. ಇನ್ನೊಂದು ಆಂತರಿಕವಾದುದು. ಹೊರಗೆ ಕಾಣುವುದು ತೋರಿಕೆಯದು, ನಿಜವಾದುದಲ್ಲ. ಅದು ಸ್ಥಾಯಿಯಲ್ಲ. ಯಾವುದು ಆಂತರಿಕವಾದುದೊ ಅದೇ ನಿಜವಾದುದು. ಹೊರಗೆ ಧೈರ್ಯಶಾಲಿಗಳಂತೆ ಕಂಡರೂ ಅವರಿಗೆ ಅಳುಕಿದೆ ಇರಬಹುದು. ತಾಳ್ಮೆ ಇರುವವರಂತೆ ಕಂಡರೂ ಅವರ ತಾಳ್ಮೆ ನೆಪಮಾತ್ರವಿರಬಹುದು. ಜ್ಞಾನಿಗಳಂತೆ ತೋರುತ್ತಿದ್ದರೂ ಅವರು ಜ್ಞಾನಶೂನ್ಯರಾಗಿರಬಹುದು. ಪ್ರಾಜ್ಞರಂತೆ ವರ್ತಿಸಿದರೂ ಅವರಲ್ಲಿ ಅನುಭವದ ಕೊರತೆ ಇರಬಹುದು. ಆದುದರಿಂದಲೇ ವ್ಯಕ್ತಿತ್ವ ಎಂಬುದು ಆಂತರಿಕ ವಿಷಯ.

**ವ್ಯಕ್ತಿತ್ವ ವಿಕಸನ ಸಾಹಿತ್ಯ**

ಇಂದಿನ ದಿನಗಳಲ್ಲಿ "ವ್ಯಕ್ತಿತ್ವ ನಿರ್ಮಾಣ", "ವ್ಯಕ್ತಿತ್ವದ ಬೆಳವಣಿಗೆ", "ವ್ಯಕ್ತಿತ್ವ ವಿಕಸನ" ಎಂಬ ಹೆಸರಿನಲ್ಲಿ ಅಪಾರ ಸಾಹಿತ್ಯ ಪ್ರಕಟವಾಗುತ್ತಿದೆ. ತರಬೇತಿ ಕಾರ್ಯಕ್ರಮಗಳು ಎಲ್ಲೆಲ್ಲೂ ನಡೆಯುತ್ತಿವೆ. ಹೆಚ್ಚಾಗಿ ಪಶ್ಚಿಮ ದೇಶದ ತಜ್ಞರು ಇವನ್ನು ಮಾಡುತ್ತಿರುವರು. ಇವು ಸಾಮಾನ್ಯವಾಗಿ ಕೈಗಾರಿಕೆ ಮತ್ತು ವಾಣಿಜ್ಯ ಉದ್ಯಮಗಳಲ್ಲಿ ಕೆಲಸ ಮಾಡುವವರಿಗೆ ಸಂಬಂಧಿಸಿರುವುವು. ಅನೇಕ ವೇಳೆ, ಭಾರತದ ಭಾರಿ ಕೈಗಾರಿಕೋದ್ಯಮಗಳಲ್ಲಿ, ಜಪಾನ್ ದೇಶೀಯರಿಂದ "ವ್ಯಕ್ತಿತ್ವ ವಿಕಾಸ"ದ ಬಗ್ಗೆ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿರುವರು. ಇದಕ್ಕೆ ಕಾರಣ, ಜಪಾನೀಯರು ಅತ್ಯಂತ ಯಶಸ್ವಿ ಉದ್ಯಮಶೀಲ ಜನಾಂಗವೆಂದು ಪರಿಗಣಿಸಲ್ಪಟ್ಟಿರುವುದು. ಈ ಶಿಬಿರಗಳಲ್ಲಿ ಹೇಳಿಕೊಡುವ ವಿಷಯಗಳು ಸಾಮಾನ್ಯವಾಗಿ ಸಂಭಾಷಣೆ, ಬಾಹ್ಯ ನಡವಳಿಕೆ, ಶಿಸ್ತು, ವಿಷಯ ಪ್ರತಿಪಾದನೆ, ಸಹೋದ್ಯೋಗಿಗಳೊಡನೆ ಸೌಹಾರ್ದಯುತ ಸಂಬಂಧ, ಇತರರೊಂದಿಗೆ ಕಲೆತು ಕೆಲಸ ಮಾಡುವುದು, ಉದ್ಯಮಶೀಲತೆ ಮುಂತಾದುವು. ಇವೆಲ್ಲಾ ಬಾಹ್ಯ ವರ್ತನೆಗೆ, ಕೆಲಸ ಮಾಡುವ ಸಂಸ್ಕೃತಿಗೆ ಸಂಬಂಧಪಟ್ಟ ಅಂಶಗಳು. ಇವು ಉದ್ಯಮಗಳ ಅಧಿಕ ಉತ್ಪನ್ನ, ಅಧಿಕ ಲಾಭಾಂಶಗಳ ದೃಷ್ಟಿಯಿಂದ ರೂಪಿಸಿರುವ ನೀತಿನಿಯಮಗಳು. ಇವನ್ನು ಮನಶ್ಶಾಸ್ತ್ರದ ನಿಯಮಗಳ ಆಧಾರದ ಮೇಲೆ ರಚಿಸಿರುವರು. ಬಾಹ್ಯ ವ್ಯಕ್ತಿತ್ವ ನಿರ್ಮಾಣಕ್ಕೆ ಈ ಅಂಶಗಳು ವ್ಯಾವಹಾರಿಕ ದೃಷ್ಟಿಯಿಂದ ಸಹಾಯಕಾರಿ. ಆದರೆ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಗೆ, ಅದರ ಶಾಶ್ವತ ಮೌಲ್ಯಗಳಿಗೆ ಭದ್ರ ಬುನಾದಿಯನ್ನು ಒದಗಿಸಲು ಅವು ಸಾಲದಾಗುವುವು.

ಮತ್ತೊಂದು ವರ್ಗದ ವ್ಯಕ್ತಿತ್ವ ವಿಕಸನ ಸಾಹಿತ್ಯವಿದೆ. ಇದರ ಆಧಾರ ಭಾರತೀಯ ತತ್ತ್ವಶಾಸ್ತ್ರ ಅಥವಾ ವೇದಾಂತ ತತ್ತ್ವ ಅಥವಾ ಧಾರ್ಮಿಕ ದೃಷ್ಟಿ. ಮೇಲೆ ತಿಳಿಸಿದ ಜಪಾನೀಯರ ವಿಧಾನದಲ್ಲಿ, ಹೆಸರು ಅವರದಿದ್ದರೂ, ಮೂಲದಲ್ಲಿ ತತ್ತ್ವವು ಭಾರತೀಯವಾಗಿರುವುದು. ನಮ್ಮ ದೇಶದಲ್ಲಿ ಸಮಾಜಶಾಸ್ತ್ರ ಮತ್ತು ಮನಃಶಾಸ್ತ್ರಗಳೆರಡೂ ಧರ್ಮದ ಆಧಾರದ ಮೇಲೆ ರಚಿಸಲ್ಪಟ್ಟಿವೆ. ಆದುದರಿಂದಲೇ ಹೊರದೇಶದ ಪಂಡಿತರಿಗೆ ಅವನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗಿರುವುದು. ಇಂದು ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಬೋಧಿಸಲ್ಪಡುತ್ತಿರುವುದು ಬಹುಭಾಗ ಪಾಶ್ಚಿಮಾತ್ಯರು ನಿರೂಪಿಸಿರುವ ಸಮಾಜಶಾಸ್ತ್ರ, ಮತ್ತು ಮನಃಶಾಸ್ತ್ರಗಳು. ಇದರಿಂದಾಗಿ ಭಾರತೀಯ ಪ್ರಾಧ್ಯಾಪಕರುಗಳಿಗೂ ನಮ್ಮ ಸಮಾಜ ಮತ್ತು ವ್ಯಕ್ತಿಗಳ ಮನಸ್ಸನ್ನು ಅರ್ಥಮಾಡಿಕೊಳ್ಳುವುದಕ್ಕೆ ಸ್ವಲ್ಪಮಟ್ಟಿಗೆ ಕಷ್ಟವಾಗುತ್ತಿದೆ. ಮಾನವನ ಮನಸ್ಸನ್ನು ವಿಶ್ಲೇಷಿಸುವುದರಲ್ಲಿ ಭಾರತೀಯರು ಬಹಳ ಮುಂದೆ ಹೋಗಿರುವರು. ಈ ವಿಷಯ ಭಾರತೀಯ ಯುವಕರಿಗೆ ತಿಳಿಯಬೇಕಾದರೆ ಅವರು ಆ ನಿಟ್ಟಿನಲ್ಲಿ ಸ್ವಲ್ಪ ವ್ಯಾಸಂಗ ಮಾಡಬೇಕು. ಅದಕ್ಕೆ ಬೇಕಾದ ಹಿನ್ನೆಲೆ ಎಲ್ಲರ ಮನೆಗಳಲ್ಲಿಯೂ ತಾನೇ ತಾನಾಗಿ ಇಂದಿಗೂ ಜೀವಂತವಾಗಿರುವುದು. ಇದನ್ನು ಇಂದಿನ ಜೀವನದ ಶೈಲಿಗೆ ಹೊಂದಿಸಿಕೊಳ್ಳಬೇಕು, ಅಷ್ಟೇ. ಈ ವಿಷಯದಲ್ಲಿ ಭರತಖಂಡ ಇತರ ದೇಶಗಳಿಗೆ ಆಚಾರ್ಯ ಸ್ಥಾನದಲ್ಲಿದೆ ಎಂದು ಸ್ವಾಮಿ ವಿವೇಕಾನಂದರು ಸ್ಪಷ್ಟವಾದ ಮಾತುಗಳಲ್ಲಿ ತಿಳಿಸಿರುವರು.

**ಉನ್ನತ ಜೀವನ—ಭಾರತೀಯ ದೃಷ್ಟಿ**

ಇಂದು ನಮ್ಮ ಜೀವನ ಅಸಹನೀಯವಾಗಿರುವುದಕ್ಕೆ ದುಃಖ ಸಂಕಟಗಳಿಂದ ಕೂಡಿದ್ದು ಶಾಂತಿವಿಹೀನವಾಗಿರುವುದಕ್ಕೆ ಮುಖ್ಯ ಕಾರಣ, ನಾವು ನಮ್ಮನ್ನು ಕೇವಲ ದೇಹವೆಂದು ಭಾವಿಸಿರುವುದು. ನಾವು ದೇಹವಲ್ಲ, ದೇಹಿಗಳು. ನಮಗೆ ಒಂದು ದೇಹವಿರುವುದು. ಈ ಗೂಡಿನಲ್ಲಿ ಒಂದು ಚೈತನ್ಯವಿರುವುದು. ಅದಿಲ್ಲದಿದ್ದರೆ ದೇಹವನ್ನು ಶವವೆಂದು ಕರೆಯುವರು. ಎಂಜಿನ್ ಇಲ್ಲದ ಕಾರನ್ನು ಗುಜರಿಗೆ ತಳ್ಳುವರು. ಹಕ್ಕಿ ಇಲ್ಲದ ಗೂಡಿಗೆ ಬೆಲೆ ಇಲ್ಲ. ನಾವು ಒಂದು ಮನೆಯಲ್ಲಿ ವಾಸಿಸುವಂತೆ ದೇಹದಲ್ಲಿ ಚೈತನ್ಯವಿರುವುದು. ಚೈತನ್ಯಕ್ಕಾಗಿಯೇ ದೇಹವನ್ನು ರಕ್ಷಿಸುವುದು ಮತ್ತು ಪೂಜಿಸುವುದು. ಚೈತನ್ಯ ಮುಖ್ಯ ದೇಹವಲ್ಲ ಎಂದರೆ, ಶರೀರವನ್ನು ಉಪೇಕ್ಷಿಸಬೇಕೆಂದಲ್ಲ. ಚೈತನ್ಯಕ್ಕಾಗಿ ಅದನ್ನು ರಕ್ಷಿಸಿ ಪೋಷಿಸಬೇಕು. ದೇಹಕ್ಕೆ ಮೊದಲನೆಯ ಪ್ರಾಶಸ್ತ್ಯವನ್ನು ಕೊಟ್ಟು, ಚೈತನ್ಯಕ್ಕೆ ಎರಡನೆಯ ಸ್ಥಾನವನ್ನು ಕೊಡಬಾರದು. ದೇಹ ನಾಶವಾಗುವುದು. ಚೈತನ್ಯ ಎಂದಿಗೂ ಇರುವುದು. ಎಲ್ಲೆಲ್ಲಿಯೂ ಎಲ್ಲದರಲ್ಲಿಯೂ ಇರುವುದು. ಅದು ದೇಹವನ್ನು ಪ್ರವೇಶಿಸಿದಾಗ ವ್ಯಕ್ತಿ ಜನಿಸುವನು. ಅದು ದೇಹದಿಂದ ಹೊರಕ್ಕೆ ಹೋದಾಗ ವ್ಯಕ್ತಿ ಇಲ್ಲವಾಗುವನು. "ನಾವು" ಎಂದರೆ ಈ ಚೈತನ್ಯ. ದೇಹವಲ್ಲದೆ ನಮಗೆ ಒಂದು ಮನಸ್ಸು ಮತ್ತು ಬುದ್ಧಿ ಕೂಡ ಇರುವುವು. ಚೈತನ್ಯ ದೇಹದಿಂದ ನಿರ್ಗಮಿಸಿದಾಗ ಇವೂ ನಾಶವಾಗುವುವು. ನಮಗಿರುವ ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ಎಲ್ಲವೂ ಮನೆಯ ಯಜಮಾನನಾದ ಚೈತನ್ಯಕ್ಕೆ ದುಡಿಯುವ ಕೆಲಸಗಾರರಂತೆ. ಯಜಮಾನರಿಲ್ಲದಿದ್ದರೆ ಕೆಲಸದವರಿಗೆ ರಜ. ಚೈತನ್ಯವನ್ನು ಮರೆತು ದೇಹದ ಸುಖ ಸಂತೋಷಗಳನ್ನು ಗಳಿಸುವುದರಲ್ಲಿಯೇ ನಿರತರಾಗಿರುವುದೇ ನಮ್ಮೆಲ್ಲ ದುಃಖ ಸಂಕಟಗಳಿಗೆ ಕಾರಣ. ಮನೆಯಲ್ಲಿ ಇರುವವರನ್ನು ಮರೆತು ಮನೆಯನ್ನೇ ಸರ್ವಸ್ವವೆಂದು ಪೂಜಿಸಿದಂತೆ, ಇದು.

ದೇಹಕ್ಕೆ ಅಂತ್ಯವಿದೆ, ಏಕೆಂದರೆ ಅದಕ್ಕೆ ಪ್ರಾರಂಭವಿದೆ. ಅದು ಬೆಳೆಯುವುದು, ಕ್ಷೀಣಿಸುವುದು. ಅದಕ್ಕೆ ಏಳುಬೀಳುಗಳಿವೆ. ಚೈತನ್ಯ ಎಂದೆಂದಿಗೂ ಇರುವುದು, ಏಕೆಂದರೆ ಅದಕ್ಕೆ ಪ್ರಾರಂಭವಿಲ್ಲ. ಜನನವಿಲ್ಲದಿದ್ದರೆ ಮರಣ ಹೇಗಾದೀತು? ಚೈತನ್ಯ ಬೆಳೆಯುವುದು ಎಂದರೆ ಅದು ಹೆಚ್ಚು ಹೆಚ್ಚು ವ್ಯಕ್ತವಾಗುವುದು ಎಂದು ಅರ್ಥ. ಅದನ್ನೇ ವ್ಯಕ್ತಿತ್ವ ವಿಕಾಸ ಎಂದು ಕರೆಯುವುದು. ವ್ಯಕ್ತಿಗಳಲ್ಲಿ ಇರುವ ಚೈತನ್ಯ ವಿಕಾಸವಾಗಬೇಕು. ಇದಕ್ಕೆ ನಾವು ಪ್ರಾಶಸ್ತ್ಯವನ್ನು ನೀಡಬೇಕು. ಚೈತನ್ಯದಿಂದ ಅಸ್ತಿತ್ವವನ್ನು ಪಡೆದಿರುವ, ಒಳಗೊಂಡಿರುವ ದೇಹ ಮನಸ್ಸು

ಬುದ್ಧಿ ಮೊದಲಾದುವನ್ನು ಚೈತನ್ಯದ ವಿಕಾಸದಲ್ಲಿ ತೊಡಗಿಸ ಬೇಕು. ಇದೇ ಅವುಗಳ ಉಪಯೋಗ. ಇದಕ್ಕಿಂತ ಒಳ್ಳೆಯ ಉಪಯೋಗ ಅವಕ್ಕಿಲ್ಲ. ಇದನ್ನೇ ಜೀವನದ ಗುರಿ, ಗಂತವ್ಯ ಎಂದು ಎಲ್ಲ ಅವತಾರ ಪುರುಷರೂ, ಆಚಾರ್ಯರೂ ಸಂತರೂ ವಿಶ್ವಾದ್ಯಂತ ಹೇಳಿರುವುದು. ಇದನ್ನು ಎಲ್ಲರೂ ಮಾಡಲೇ ಬೇಕಾಗಿರುವುದು. ಇದನ್ನು ಮಾಡದೇ ಇರುವುದರಿಂದಲೇ ಅತೃಪ್ತಿ ಅಸಂತೋಷ ಆಗಾಗ ತಲೆದೋರುವುದು.

ವ್ಯಕ್ತಿತ್ವ ವಿಕಸನ

ಇದನ್ನು ಮಾಡುವುದು ಹೇಗೆ? ಇದಕ್ಕೆ ಒಂದೇ ಮಾರ್ಗ ವಲ್ಲ ಇರುವುದು, ಹಲವಾರು ಮಾರ್ಗಗಳಿವೆ. ಕಾರಣ, ವ್ಯಕ್ತಿ ಗಳಲ್ಲಿರುವ ವೈವಿಧ್ಯತೆ. ಇದು ಸುಲಭವೇ? ಬೇಗನೆ ಈ ಕೆಲಸ ವನ್ನು ಮಾಡಿಹಾಕಿ ನಮ್ಮ ಎಂದಿನ ಸುಖ-ಸಂತೋಷಗಳ ಕಾರ್ಯಕ್ರಮವನ್ನು ಮುಂದುವರೆಸೋಣ ಎಂದು ಯೋಚಿಸುವು ದಾದರೆ, ಇದು ಸುಲಭವಾದುದಲ್ಲ. ಸ್ವಲ್ಪ ಕಷ್ಟವೇ. ಇದು ಕಷ್ಟಸಾಧ್ಯ. ಪ್ರಯತ್ನ, ಸಾಧನೆ ಬೇಕು. ಹೋರಾಡಬೇಕು. ಇದಕ್ಕೆ ನಾವು ಎಷ್ಟು ಖರ್ಚುಮಾಡಬೇಕು ಎಂದು ಕೇಳಿದರೆ, ನಮ್ಮಲ್ಲಿರುವ ಎಲ್ಲ ಶಕ್ತಿ ಸಾಮರ್ಥ್ಯಗಳನ್ನೂ ಖರ್ಚು ಮಾಡ ಬೇಕು. ಈ ಕೆಲಸಕ್ಕೆ ಎಷ್ಟು ಕಾಲ ಹಿಡಿಯುವುದು? ಇದನ್ನು ನಿರಂತರವಾಗಿ ಮಾಡುತ್ತಿರಬೇಕಾಗುವುದು. ಇದರಿಂದ ವಿರಾಮ ವಿಲ್ಲ. ನಾವು ಆಗಾಗ ರಜೆ ತೆಗೆದುಕೊಳ್ಳಲು ಪ್ರಯತ್ನಿಸುವೆವು. ಈ ಹೋರಾಟದಲ್ಲಿ ರಜೆಯಿಲ್ಲ! ಈ ಹೋರಾಟ ನಡೆಯುವ ಸ್ಥಳ ಯಾವುದು? ಈ ಪ್ರಪಂಚವೇ ಇದರ ಯುದ್ಧಭೂಮಿ. ಈ ಕುಸ್ತಿ ನಮ್ಮ ಮನಸ್ಸಿನ ಒಳಗೆ ಮತ್ತು ಬುದ್ಧಿಯ ಒಳಗೂ ನಡೆಯುವುದು. ಇದರಿಂದ ನಾವು ನಿವೃತ್ತರಾಗಬಹುದೇ? ಇದು ಒಂದೇ ದಾರಿ. ಹಿಂದಕ್ಕೆ ಹೋಗುವಂತಿಲ್ಲ. ಮುಂದಕ್ಕೇ ಹೋಗಬೇಕು. ಮಧ್ಯೆ ನಿಲ್ಲಬಹುದೇ? ಪೂರ್ಣ ವಿರಾಮ ಇಲ್ಲ, ಅಲ್ಪ ವಿರಾಮ ಇರಬಹುದು. ಈ ಕೆಲಸವನ್ನು ಯಾರಿ ಗಾದರೂ ಗುತ್ತಿಗೆ ವಹಿಸಬಹುದೇ ಎಂದರೆ ಅದೂ ಸಾಧ್ಯವಿಲ್ಲ, ನಾವೇ ಮಾಡಬೇಕು. ಇದೊಂದು self-labour contract.

ಚೈತನ್ಯದ ವಿಕಾಸ ಇಷ್ಟು ಬಿಕ್ಕಟ್ಟಿನಿಂದ ಕೂಡಿರಲು ಕಾರಣ ವೇನು? ಒಂದು, ಅದು ನಮ್ಮಲ್ಲಿ ಅಂತರತಮವಾಗಿದೆ. ಅದು ಅತ್ಯಂತ ಆಳದಲ್ಲಿ ಹುದುಗಿರುವುದು. ಅದು ಪಂಚಕೋಶಗಳ ಒಳಗೆ ಇರುವುದು ಎಂದು ಹೇಳುವರು. ಅತ್ಯಂತ ಹೊರಗಡೆ ಇರುವ ಕೋಶವೇ ನಮ್ಮ ದೇಹ. ಒಂದರೊಳಗೆ ಒಂದಂತೆ ಇನ್ನೂ ನಾಲ್ಕು ಕೋಶಗಳಿವೆ. ಇವೆಲ್ಲದರ ಒಳಗೆ ಈ ಚೈತನ್ಯ ಇರುವುದು. ಇದನ್ನು ಆತ್ಮ, ಶಕ್ತಿ, ಭಗವಂತ, ಅಂತರಾತ್ಮ, ಬ್ರಹ್ಮ ಎಂದೆಲ್ಲಾ ಸಂಬೋಧಿಸುವರು. ದೇಹದ, ಮನಸ್ಸಿನ, ಬುದ್ಧಿಯ ಸಮಸ್ತ ವ್ಯಾಪಾರಗಳೂ ನಡೆಯುವುದು ಇದರ ಶಕ್ತಿ ಯಿಂದಲೇ. ಇದು ಹೊರನಡೆದರೆ ಸಮಸ್ತ ವ್ಯಾಪಾರಗಳೂ ತಟಸ್ಥವಾಗುವುವು, ಗಡಿಯಾರದಿಂದ ಬ್ಯಾಟರಿ ತೆಗೆದಂತೆ. ದೇಹ ಮನಸ್ಸು ಬುದ್ಧಿಗಳ ಎಲ್ಲ ಚಟುವಟಿಕೆಗಳನ್ನೂ ನಿಯಂತ್ರಿಸು ವುದೇ ಇದು. ಆದರೆ ಇದು ಎಲ್ಲಿಯೂ ಕಾಣದಂತೆ ಎಲ್ಲದರ ಒಳಗಡೆ ಇದೆ. ಇದರ ಅಸ್ತಿತ್ವ ನಮಗೆ ಗೊತ್ತಾಗುವುದೇ ಇಲ್ಲ. ನಮ್ಮ ಗಮನ ಇದರ ಕಡೆ ಹರಿಯದೆ ಇದರಿಂದ ಪ್ರೇರಿತವಾದ ವ್ಯವಹಾರಗಳ ಕಡೆಗೇ ಹೋಗುವುದು. ಇದು ಕಣ್ಣು ಕೋರೈ ಸುವ ಚಿತ್ತಾಕರ್ಷಕ ವರ್ಣರಂಜಿತ ವೈವಿಧ್ಯಮಯ ಕಲಾತ್ಮಕ ದೀಪಾಲಂಕಾರವನ್ನು ನೋಡುವಂತೆ. ಅದರ ಹಿಂದಿರುವ ವಿದ್ಯುತ್ ಶಕ್ತಿಯ ಕಡೆ ನಮ್ಮ ಗಮನ ಹೋಗುವುದೇ ಇಲ್ಲ.

ಚೈತನ್ಯವೆಂಬುದು ಅತ್ಯಂತ ಆಳವಾಗಿ ಅತ್ಯಂತ ಗುಹ್ಯ ವಾಗಿರುವುದು ಮೊದಲ ಕಾರಣವಾದರೆ ಎರಡನೆಯದು, ಅದು ನಮ್ಮಲ್ಲಿಯೇ ಇರುವುದು. ಒಂದು ವಸ್ತುವನ್ನು ನಾವು ನೋಡ ಬೇಕಾದರೆ ಅದು ನಮ್ಮ ಹೊರಗಡೆ ಇರಬೇಕು. ನಮ್ಮಲ್ಲಿಯೇ ಇರುವುದನ್ನು ನೋಡಲಾರೆವು. ಕಣ್ಣಿನಿಂದ ಎಲ್ಲವನ್ನೂ ನೋಡು ವೆವು ಆದರೆ, ನಮ್ಮ ಕಣ್ಣನ್ನು ನಾವೇ ನೋಡಲಾಗುವುದಿಲ್ಲ ಎಂದು ಶ್ರೀರಾಮಕೃಷ್ಣರು ಉದಾಹರಿಸುವರು.

ನಮ್ಮ ಅಂತಃಶಕ್ತಿಯ ಅಭಿವ್ಯಕ್ತಿಗೆ ಅಡ್ಡಿಯಾಗಿರುವುದು ನಮ್ಮ ಇಂದ್ರಿಯಗಳು. ಅವು ಹೊರಪ್ರಪಂಚದ ಸುದ್ದಿಗಳನ್ನು ನಿರಂತರವಾಗಿ ನಮಗೆ ರವಾನಿಸುತ್ತಿರುವುವು. ಇದರಿಂದ ನಮ್ಮ ಗಮನ ವ್ಯವಹಾರ ಪ್ರಪಂಚದ ಕಡೆ ಹೋಗಿ ವ್ಯಕ್ತಿತ್ವದ ಕಡೆ ಬರುವುದಿಲ್ಲ. ಆದರೆ ಇಂದ್ರಿಯಗಳ ಉಪಯೋಗವಿಲ್ಲದೆ ನಾವು ಜೀವಿಸಲಾರೆವು. ಈ ಸಮಸ್ಯೆಯನ್ನು ಭಾರತೀಯ ಋಷಿಗಳು, ದ್ರಷ್ಟಾರರು ಬಿಡಿಸಿರುವರು. ಈ ದೇಹ ಇಂದ್ರಿಯಗಳ ಮೂಲಕವೇ ವ್ಯಕ್ತಿತ್ವ ನಿರ್ಮಾಣದ ಕೆಲಸ ಸಾಧಿಸುವುದು ಹೇಗೆ ಎಂಬುದನ್ನು ಕಂಡುಹಿಡಿದಿರುವರು. ಇದು ರೋಗಾಣು ಗಳಿಂದಲೇ ರೋಗಕ್ಕೆ ಮದ್ದನ್ನು ತಯಾರಿಸುವಂತೆ.

ವ್ಯಕ್ತಿತ್ವ ವಿಕಸನವು ಮಾನವ ಜೀವನದ ಪರಮ ಗಂತವ್ಯ. ಇದು ನಾವು ಸೇರಬೇಕಾದ ಗುರಿ, ಪಡೆಯಬೇಕಾದ ಸ್ಥಿತಿ. ಇದು ಕೊನೆ, ಪ್ರಾರಂಭವಲ್ಲ. ಈ ಸ್ಥಿತಿಗೆ ನಾವು ನೆಗೆಯಲಾಗು ವುದಿಲ್ಲ, ನಿಧಾನವಾಗಿ ಹೋಗಬೇಕಾಗುವುದು. ಗುರಿ ಇಲ್ಲದ ದಾರಿ ಇಲ್ಲ. ಆದುದರಿಂದ ಸೇರಬೇಕಾದ ಗುರಿಯನ್ನು ಸರಿ ಯಾಗಿ ತಿಳಿದುಕೊಳ್ಳುವುದು ಮುಖ್ಯ. ಇದನ್ನು ಮಾಡದಿದ್ದರೆ ನಾವು ಹಿಡಿಯುವ ದಾರಿ ಮತ್ತಾವುದೋ ಗುರಿಗೆ ನಮ್ಮನ್ನು ಕೊಂಡೊಯ್ಯುವುದು. ಉನ್ನತ ಜೀವನ ಬಯಸುವವರಿಗೆ ಗುರಿಯ ಲಕ್ಷ್ಯದ ಜತೆಗೆ, ಯೋಜನೆ, ತರಪೇತು, ಪೂರ್ವ ಸಿದ್ಧತೆ, ಸಾಧನೆ, ಹೋರಾಟ, ಬಲವಾದ ದೇಹ, ಮನಸ್ಸು, ಇಚ್ಛಾಶಕ್ತಿ, ಕ್ರಿಯಾಶಕ್ತಿ, ತಿಳಿವಳಿಕೆ, ವಿವೇಕ—ಇವೆಲ್ಲವೂ ಬೇಕಾ ಗುತ್ತವೆ. ಹಿಮಾಲಯದ ಯಾತ್ರೆಗೆ ಹೋಗುವವರಂತೆ ನಾವು ಇವನ್ನೆಲ್ಲಾ ಸಜ್ಜುಗೊಳಿಸಬೇಕು. ದಾರಿ ಸರಿಯಾಗಿದ್ದರೆ, ದೃಢ ಸಂಕಲ್ಪವಿದ್ದರೆ, ಸಿದ್ಧತೆ ಸರಿಯಿದ್ದರೆ ಗುರಿ ಸಿಗುವುದು. ಇದೇ ವ್ಯಕ್ತಿತ್ವ ವಿಕಸನದ ಮಾರ್ಗ.

*(ಮುಂದುವರೆಯುವುದು)*